

# ಮನೆ-ಮನೆ ಕಥೆ
# ಮನೆದೇವ್ರು




**ಸೋಮ-ಶನಿ, ರಾತ್ರಿ 10.30**

colors ಕನ್ನಡ

ಅಪ್ಪಟ ಮಲೆನಾಡಿನ ಪುಟ್ಟ ಹಳ್ಳಿ ಹೇಮಾದ್ರಿಯ ಹುಡುಗಿ ಜಾನಕಿ. ಊರಿಗೆ ಊರೇ ಮೆಚ್ಚುವಂತ ಉತ್ಸಾಹದ ಚಿಲುಮೆ. ವೆಂಕಟರಮಣ ದೇವಸ್ಥಾನದ ಅರ್ಚಕ ಸುದರ್ಶನ ಯಜುರ್ವೇದಿ-ಸಾವಿತ್ರಿ ದಂಪತಿಯ ಒಬ್ಬಳೇ ಮಗಳು. ಜಾನಕಿಗೆ ತನ್ನ ಅಣ್ಣ ನರಹರಿಯಷ್ಟೇ, ಚಿಕ್ಕಪ್ಪ ಸದಾಶಿವ-ಚಿಕ್ಕಮ್ಮ ಅನ್ನಪೂರ್ಣನ ಮಕ್ಕಳಾದ ಅನು, ಪ್ರೀತಿ ಸುನೀಲರ ಮೇಲೂ ಅಕ್ಕರೆ. ಪ್ರೀತಿಗಿಂತ ಐದಾರು ತಿಂಗಳಿಗೆ ಹಿರಿಯಳಾದ ಜಾನಕಿಗೆ ಅಮೇರಿಕದಲ್ಲಿರೋ ಯುವಕ ದೇವ್‌ನೊಂದಿಗೆ ಮದುವೆ ನಿಶ್ಚಯವಾಗುತ್ತೆ. ಮತ್ಸರದಿಂದ ಜಾನಕಿಗೆ ಬಂದ ವರನನ್ನ ಮೋಸದಿಂದ ಪ್ರೀತಿಯ ಜೊತೆ ಮದುವೆ ಮಾಡಿಸ್ತಾಳೆ ಅನ್ನಪೂರ್ಣ. ಮಗಳ ಮದುವೆ ನಿಂತು ಹೋದ ದುಃಖ ತೀರೋ ಮೊದಲೇ ಯಜುರ್ವೇದಿಗಳೂ ತೀರಿಕೊಳ್ತಾರೆ. ನಂತರದ ಏಳು ವರ್ಷದಲ್ಲಿ, ಹಲವಾರು ಪ್ರಸ್ತಾಪಗಳು ಬಂದರೂ ಜಾನಕಿಯ ಮದುವೆ ನಡೆಯಲ್ಲ.

ಅಕ್ಕ ಜಾನಕಿಯ ಮದುವೆ ಮಾಡದೆ, ಅನು ಮದುವೆ ಮಾಡೋದಾ ಅನ್ನೊ ಜಿಜ್ಞಾಸೆಯಲ್ಲಿ ಮನೆಯವರಿದ್ದಾಗಲೇ, ಸೂರ್ಯನ ಪ್ರವೇಶವಾಗುತ್ತೆ. ಅಗರ್ಭ ಶ್ರೀಮಂತ, ಮೌಢ್ಯಗಳ ಒಡೆಯ, ಫ್ಯೂಡಲ್ ಮೆಂಟಾಲಿಟಿಯ ತಂದೆ ಜಯರಾಮನ ದಬ್ಬಾಳಿಕೆಗೆ ಜುಗುಪ್ಸೆಪಟ್ಟು, ದೂರದ ಅಮೇರಿಕದಲ್ಲಿ ಸ್ವತಂತ್ರವಾಗಿ ಬದುಕೋ ಕನಸು ಕಂಡವನು. ಅವನ ಕನಸಿಗೆ ಗುಪ್ತವಾಗಿ ಬೆಂಬಲ ಕೊಟ್ಟೋಳು ರೋಹಿಣಿ. ಇವರೆಲ್ಲರ ಜೀವನವನ್ನ ಅಲ್ಲೋಲ ಕಲ್ಲೋಲ ಮಾಡಿದೋಳು ಕೊರವಂಜಿ.

'ಸೀತಾಮಾತೆಯಂತ ಸೊಸೆ ನಿನ್ನ ಮನೆ ಬೆಳಗ್ತಾಳೆ, ನಿನ್ನ ಅಹಂಕಾರದ ಸಾಮ್ರಾಜ್ಯ ಮಣ್ಣು ಮಾಡ್ತಾಳೆ' ಅನ್ನೋ ಕಣಿ ಕೇಳಿ, ಕೆಂಡಾಮಂಡಲನಾಗೋ ಜಯರಾಮ. ತನ್ನ ಭದ್ರಕೋಟೆಗೆ ಲಗ್ಗೆ ಇಡೋ ಮೊದಲೇ ಆ ಹುಡುಗಿಯ ಹುಟ್ಟು ಅಡಗಿಸ್ತೀನಿ ಅನ್ನೋ ಪಣತೊಡ್ತಾನೆ. ಜಯರಾಮನ ಅಣ್ಣ ಶಿವರಾಮ ಪರಾಧೀನ, ಅಸಹಾಯಕ. ಹೆಂಡತಿಯನ್ನ ಕಳೆದುಕೊಂಡು, ದುಶ್ಚಟಗಳಿಗೆ ದಾಸನಾದ ಮಗನನ್ನ ತಿದ್ದಲಾಗದೆ, ತಮ್ಮನ ದರ್ಪಕ್ಕೆ ಮೂಗುದಾರ ಹಾಕಲೂ ಆಗದೆ, ಆಯುಷ್ಯ ಕಳೀತಿರೋನು. ಜಯರಾಮನ ತಮ್ಮ ರಘುರಾಮ, ಸ್ವಾರ್ಥಕ್ಕೋಸ್ಕರ ಅಣ್ಣನ ಕುಕೃತ್ಯಗಳಿಗೆ ಕುಮ್ಮಕ್ಕು ನೀಡೋನು. ಮಹತ್ವಾಕಾಂಕ್ಷಿ. ಕೊನೆಯ ತಮ್ಮ ಅಭಿರಾಮ 'ಒಳ್ಳೆದು ಬೇಡ ಕೆಟ್ಟದು ಬೇಡ' ಅಂತಿರೋ ನಿರ್ಲಿಪ್ತ ಜಡಭರತ. ಬದುಕಿನ ಬಗ್ಗೆ ಹೆಂಡತಿ ಅರ್ಚನಾಗೆ ಇರೋ ಅರ್ಧದಷ್ಟು ಉತ್ಸಾಹವೂ ಅವನಿಗಿಲ್ಲ.

ಜಯರಾಮನ ಅಧಿಕಾರದ ದರ್ಪಕ್ಕೆ ತದ್ವಿರುದ್ಧವಾದ ಸರಳ ಜೀವನ ಆದರ್ಶ ಪ್ರೀತಿಯನ್ನ ನೆಚ್ಚಿಕೊಂಡವನು ಸೂರ್ಯ. ತನ್ನ ಹಣ, ರೂಪ, ಅಂತಸ್ತು ಯಾವುದನ್ನೂ ತೋರ್ಪಡಿಸಿಕೊಳ್ಳದೆ, ತನ್ನ ಗುಣ-ವ್ಯಕ್ತಿತ್ವವನ್ನೇ ಮೆಚ್ಚಿ, ಜಾನಕಿಯ ಮನಸು ಗೆಲ್ತೀನಿ ಅನ್ನೋ ಹಠ. 'ಪೀಪಿ ಊದೋನಾಗಿ' ಅವಳನ್ನ ಎಡಬಿಡದೆ ಹಿಂಬಾಲಿಸಿ, ಆಪತ್ತಿನ ಸಂದರ್ಭದಲ್ಲಿ ಅವಳನ್ನ ರಕ್ಷಣೆ ಮಾಡ್ತ, ಕೊನೆಗೊಮ್ಮೆ ಅವಳ ಮನಸ್ಸು ಗೆಲ್ಲೋದ್ರಲ್ಲಿ ಯಶಸ್ವಿಯಾಗ್ತಾನೆ.. ಆದ್ರೆ ಮದುವೆಗೆ ತಂದೆ ಅನುಮತಿ ಕೊಡಲ್ಲ. ಬುದ್ಧಿ ಹೇಳಿದ ರೋಹಿಣಿಗೆ ಮಾರಣಾಂತಿಕವಾಗಿ ಹೊಡಿತಾನೆ. ಅದೇ ಕೋಪದಲ್ಲಿ ಸೂರ್ಯ ಅಮ್ಮನೊಂದಿಗೆ ಮನೆಬಿಟ್ಟು ಬರ್ತಾನೆ. ಅಪ್ಪನ ಹೆಸರು ಹೇಳಲು ಇಷ್ಟಪಡದ ಸೂರ್ಯ, 'ತಾನೊಬ್ಬ ಅನಾಥ, ತಾಯಿ ಬಿಟ್ರೆ ತನಗ್ಯಾರು ಇಲ್ಲ' ಅಂತ ಹೇಳಿಯೇ ಸಾವಿತ್ರಿಯನ್ನ ಒಪ್ಪಿಸಿ, ಜಾನಕಿಯನ್ನ ಮದುವೆಯಾಗ್ತಾನೆ.

ಈ ನಡುವೆ, ಜಾನಕಿಯ ತಂಗಿ ಅನು ಸೂರ್ಯನ ದೊಡ್ಡಪ್ಪ ಶಿವರಾಮನ ಮಗನಾದ ಕಿರಾತಕ ಕಿರಣನ ಕೈ ಹಿಡಿತಾಳೆ. ಗಂಡನ ಮದ್ಯ ವ್ಯಸನ, ಪರಸ್ತ್ರೀ ಸಂಬಂಧ, ಮಾವನ ಮನೆಯ ನಿರ್ಬಂಧಗಳಿಂದ ಮಾನಸಿಕವಾಗಿ ಕುಗ್ಗಿದಾಳೆ. ತನ್ನ ಗಂಡ-ಅತ್ತೆಯ ಕಣ್ಣೀರಿಗೆ ಕಾರಣವಾಗಿರೋರೆ ತನ್ನ ತಂಗಿಯ ಹುಚ್ಚಿಗೆ ಕಾರಣ ಅನ್ನೋದು ಜಾನಕಿಗೆ ಗೊತ್ತಿಲ್ಲ. ಅದು ಗೊತ್ತಾಗತ್ತಾ? ಆಕೆ ತಂಗಿಯ ರಕ್ಷಣೆಗೆ ಬರ್ತಾಳಾ? ಮನೆಯಿಂದ ದೂರವಾಗಿರೋ ತನ್ನ ಮನೆದೇವರನ್ನ ವಾಪಾಸು ಸಂಸಾರ ಸೇರಿಸ್ತಾಳಾ? ಅತ್ತೆಯ ಕನಸು ನನಸು ಮಾಡ್ತಾಳಾ? ಸಾವನ್ನ ಗೆದ್ದು, ಸಾವಿನ ರಾಯಭಾರಿ ಜಯರಾಮನಿಗೆ ಸವಾಲಾಗ್ತಾಳಾ? ಅಥವಾ..

ಅಪ್ಪನ ನೆರಳು ಸೋಂಕದಂತೆ ತನ್ನ ತಾಯಿಯನ್ನ ಹೆಂಡತಿಯನ್ನ ಕಾಪಾಡಿಕೊಂಡು, ಸ್ವತಂತ್ರವಾಗಿರೋ ಆಸೆ ಹೊತ್ತು ಅಮೇರಿಕಕ್ಕೆ ಹೊರಟಿದಾನೆ ಸೂರ್ಯ. ಅವನ ಕನಸು ನಿಜ ಆಗತ್ತಾ? ಅಥವಾ.. ಗಂಡನ ಮನೆಯ ಯಾವ ರಹಸ್ಯಗಳನ್ನು ಅರಿಯದ ಮುಗ್ಧ ಜಾನಕಿ, ಮಾವನ ದ್ವೇಷಕ್ಕೆ ಬಲಿಯಾಗ್ತಾಳಾ?

ಇಲ್ಲಿ ತನಕ ದುರಾದೃಷ್ಟದಿಂದ ಸೋತರು ಹಠ ಬಿಡದ ಜಯರಾಮನಿಗೆ ವಿಧಿ ಕೈ ಹಿಡಿಯತ್ತಾ? ತನ್ನ ಅಸ್ತಿತ್ವಕ್ಕೆ ಸವಾಲಾಗಿರೋ ಸೊಸೆಯನ್ನ ಆತ ಮಣ್ಣು ಮಾಡ್ತಾನಾ?

ಡಾ. ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣ ಸಂಸ್ಥೆ ನಿರ್ಮಿಸ್ತಾ ಇರೋ ಈ ಧಾರಾವಾಹಿಗೆ ಚರಣ್ ರಾ ಮಲ್ನಾಡ್ ನಿರ್ದೇಶನ, ಮಾಲತಿ ಬೇಲೂರು ಚಿತ್ರಕಥೆ, ಪದ್ಮಿನಿ ಎಸ್ ಜೈನ್ ಸಂಭಾಷಣೆ. ಈ ಧಾರಾವಾಹಿಯ ಯಶಸ್ಸಿನ ಹಿಂದೆ ಜಯರಾಮನಾಗಿ ರವಿಕುಮಾರ್, ತಮ್ಮನಾಗಿ ವಿಜಯ್ ಜಟ್ಟಿ ಸಾಥ್, ಅಮ್ಮ ಮಗ ಜೂಜೇ ಜೋಸೆಫ್-ಅಶ್ವಿನಿ ಗೌಡ, ನಾಯಕಿ ನಟಿ ಅರ್ಚನಾ, ತಂಗಿ ವರ್ಷಿತಾ ಸೇರಿದಂತೆ ಅಭಿನಯ ಚತುರರ ತಾರಾಬಳಗವಿದೆ.